3.	ಸರ್ಕಾರಿ ಕಿರಿಯ ಕಾಲೇಜು	12	54
	ಗುಲ್ಬರ್ಗಾ ತಾಲ್ಲೂಕು		
1.	ಸರ್ಕಾರಿ ಪ್ರಾಥಮಿಕ ಶಾಲೆ	154	59
2.	ಸರ್ಕಾರಿ ಪ್ರೌಢ ಶಾಲೆ	9	74
3.	ಸರ್ಕಾರಿ ಕಿರಿಯ ಕಾಲೇಜು	4	18

ಆಳಂದ ತಾಲ್ಲೂಕು	ಖಾಲಿ ಇರುವ ಶಿಕ್ಷಕರ ಸಂಖ್ಯೆ
ಸರ್ಕಾರಿ ಪ್ರಾಥಮಿಕ ಶಾಲೆ	45
ಸರ್ಕಾರಿ ಪ್ರೌಢಶಾಲೆ	70
ಸರ್ಕಾರಿ ಕಿರಿಯ ಕಾಲೇಜು	55
ಗುಲ್ಬರ್ಗಾ ತಾಲ್ಲೂಕು	
ಸರ್ಕಾರಿ ಪ್ರಾಥಮಿಕ ಶಾಲೆ	35
ಸರ್ಕಾರಿ ಪ್ರೌಢಶಾಲೆ	4
ಸರ್ಕಾರಿ ಕಿರಿಯ ಕಾಲೇಜು	11

ಅದಷ್ಟು ಬೇಗನೆ ಖಾಲಿಯಿರುವ ಹುದ್ದೆಗಳನ್ನು ತುಂಬಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

95 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕು.ಕ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ – ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ವೈದ್ಯರಿಲ್ಲದೆ ಆಸ್ಪತ್ರೆಗಳ ಸಂಖ್ಯೆ ಎಷ್ಟು ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದೆ. (ತಾಲ್ಲೂಕುವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು):

ದಿನಾಂಕ 15-2-95ರಂದು ಜಿಲ್ಲಾಧಿಕಾರಿ ಧಾರವಾಡ ಇವರಿಂದ ಸ್ವೀಕೃತವಾಗಿರುವ ವರದಿಯ ಮೇರೆಗೆ 13 ಪ್ರಾಥಮಿಕ ಆರೋಗ್ಯ ಕೇಂದ್ರ ಕೇಂದ್ರ ಘಟಕ ಇಲ್ಲಿಗೆ ದಿನಾಂಕ 21-3-95ರಂದು ಗುತ್ತಿಗೆ ಆಧಾರದ ವೈದ್ಯರುಗಳನ್ನು ನೇಮಕ ಮಾಡಲಾಗಿದೆ. ಅವಶ್ಯಕ ವೆರಿಫಿಕೇಷನ್ ಆದ ಕೂಡಲೇ ಸದರಿ ವೈದ್ಯರುಗಳು ನೇಮಕಾತಿ ಆಗಿರುವ ಸ್ಥಳದಲ್ಲಿ ವರದಿ ಮಾಡಿಕೊಳ್ಳುವರು. ಇನ್ನೂ ಹುದ್ದೆ ಖಾಲಿ ಉಳಿದ ಬಗ್ಗೆ ಜಿಲ್ಲಾಧಿಕಾರಿಯವರಿಂದ ವರದಿ ಬಂದ ತಕ್ಷಣ ಅವಶ್ಯವಿದ್ದಲ್ಲಿ ಇನ್ನೊಂದು ತಂಡದಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಿಸಲಾಗುವುದು.

ವಿವಿಧ ಆಸ್ಪತ್ರೆಗಳಿಗೆ ಔಷಧಿ ಹಾಗೂ ವೈದ್ಯರು

96 - ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ದರ್ಜೆಯ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ದರ್ಜೆಯ ಆಸ್ಪತ್ರೆಗಳಿಗೆ ಪ್ರತಿವರ್ಷ ಪೂರೈಸುವ ಔಷಧದ ಬೆಲೆ ಎಷ್ಟು?